- - ಅಸಲು ದಾವೆ ಸಂ: **60/2024** ಪಿ .ಡಬ್ಲು **-1**

**ದಿ: 11-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ:**

1. ನಾನು ಒಕ್ಕಲುತನ ಮಾಡುತ್ತೇನೆ. ದಾವೆಯನ್ನು ನಾನು ಇಮಾಮಅಲಿ ಅವರ ವಿರುದ್ಧ ಅವರು ನನ್ನ ಹೊಲವನ್ನು ಒತ್ತುವರಿ ಮಾಡಲು ಹತ್ತಿದ್ದಾರೆ ಎಂದು ಸಲ್ಲಿಸಿದ್ದೇನೆ. ಒತ್ತುವರಿ ಯಾವಾಗಿನಿಂದ ಆಗಿದೆ ಎಂದರೆ ಸಾಕ್ಷಿಯು ನನ್ನ ಭಾಗ ಆದಾಗಿನಿಂದ ಒತ್ತುವರಿ ಆಗಿದೆ ಎಂದು ಹೇಳುತ್ತಾರೆ. 2012 ರಲ್ಲಿ ನನಗೆ ಭಾಗ ಆಗಿರುತ್ತದೆ. 2012 ರಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ನನಗೆ ಗೊತ್ತಿತ್ತು. 2012 ರಿಂದ 2024 ರವರೆಗೆ ಯಾಕೆ ಸುಮ್ಮನಿದ್ದಿರಿ ಎಂದರೆ ಸಾಕ್ಷಿಯು ನಾನು ಬೆಂಗಳೂರಿಗೆ ಹೋಗಿದ್ದೇ

ಎನ್ನುತ್ತಾರೆ. 2012 ರ ದಾವಾ ಕಾರಣವನ್ನು ತೋರಿಸಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು 2012 ರಿಂದ ಇಲ್ಲಿಯವರೆಗೆ ಒತ್ತುವರಿ ಮಾಡಿದ್ದರಿಂದ ಸಲ್ಲಿಸಿದ್ದೇನೆ. 2012 ರಿಂದ ಒತ್ತುವರಿ ಮಾಡಿದ್ದಾರೆಂದ ದಾವಾ ಕಾರಣ ತೋರಿಸಿ ದಾವೆಯನ್ನು ಸಲ್ಲಿಸಿರುತ್ತೇನೆ. ದಿನಾಂಕ: 12-12-2012 ರಂದು ನಾವು ಭಾಗ ಮಾಡಿಕೊಂಡಿರುತ್ತೇವೆ. ಲಿಖಿತ ರೂಪದಲ್ಲಿ ಭಾಗ ಮಾಡಿಕೊಂಡಿರುತ್ತೇವೆ. ಲಿಖಿತ ರೂಪದಲ್ಲಿ ಮಾಡಿದ ಭಾಗದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎನ್ನುತ್ತಾರೆ. 12-12-2012 ರಂದು ನನ್ನ ತಂದೆಯ ಜೊತೆಗೆ ನಾವು 3 ಜನ ಅಣ್ಣ ತಮ್ಮಂದಿರರಾದ, ಬಾಬು, ಅಹ್ಮದ ಹುಸೇನ, ನನ್ನ ತಂದೆ ಮತ್ತು ನಾನು 04 ಜನ ಭಾಗ ಮಾಡಿಕೊಂಡಿರುತ್ತೇವೆ. ಭಾಗ ಮಾಡಿಕೊಂಡಾಗ ನನ್ನ ತಂದೆಗೆ 06 ಎಕರೆ 25 ಗುಂಟೆ ಆಸ್ತಿ ಇತ್ತು. ಆ 06 ಎಕರೆ 25 ಗುಂಟೆ ಜಮೀನು ಸ ನಂ 29/1 ನನ್ನ ತಂದೆಯ ಹೆಸರಿನಲ್ಲಿತ್ತು. ನನ್ನ ತಂದೆಯ ಪೂರ್ಣ ಹೆಸರು ದೊಡ್ಡ ಇಮಾಮಸಾಬ ಅಂತಾ ಇರುತ್ತದೆ. 06 ಎಕರೆ 25 ಗುಂಟೆ ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ. ಭಾಗ ಮಾಡಿಒಕೊಂಡಿರುವ ಆಸ್ತಿ ನನ್ನ ತಾತನಿಂದ ನನ್ನ ತಂದೆಗೆ ನೇರವಾಗಿ ಆಗಿರುತ್ತದೆ. ನನ್ನ ತಾತನ ಹೆಸರು ದೊಡ್ಡಬಾವಾಸಾಬ ತಂದೆ ಇಮಾಮಸಾಬ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿಮ್ಮ ತಾತನಿಂದ ನಿಮ್ಮ ತಂದೆಗೆ ಜಮೀನು ಬಂದಿದೆ ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ.

2. 2012 ರಲ್ಲಿ ಭಾಗ ಆದಾಗ ನನ್ನ ತಂದೆ 03 ಎಕರೆ 17 ಗುಂಟೆ, ಪ್ರತಿವಾದಿಗೆ 38 ಗುಂಟೆ, ಜಾಫರಸಾಬರವರಿಗೆ ಒಂದು 25 ಗುಂಟೆ, ಮತ್ತೊಂದು 16 ಗುಂಟೆ ಭಾಗ ಬಂದಿರುತ್ತದೆ. 2012 ರಲ್ಲಿ ನನ್ನ ತಂದೆ ಜೊತೆಗೆ ನನ್ನ ಸಹೋದರರು ಭಾಗ ಮಾಡಿಕೊಂಡಾಗ ನಮಗೆ ಒಂದೊಂದು ಎಕರೆ ಭಾಗ ಬಂದಿರುತ್ತದೆ. ನನ್ನ ತಂದೆಗೆ 17 ಗುಂಟೆ ಉಳಿದಿರುತ್ತದೆ. ಆ 17 ಗುಂಟೆಯನ್ನು ನನ್ನ ತಂದೆ

ಮಹ್ಮದರಫಿ ರವರಿಗೆ ಮಾರಾಟ ಮಾಡಿರುತ್ತಾರೆ. 2012 ರಲ್ಲಿ ಭಾಗ ಆದ ಮೇಲೆ ನನ್ನ ಹೆಸರಿಗೆ ದಾಖಲಾತಿ ಆಗಿರುತ್ತದೆ. 2012 ರಲ್ಲಿ ನನ್ನ ಭಾಗದ ಪ್ರಕಾರ ಜಮೀನು ಸರ್ವೆಯನ್ನು ಮಾಡಿಸಿರುವುದಿಲ್ಲ. ಜಮೀನು ಸರ್ವೆ ನಮ್ಮ ತಂದೆಯವರ ಹೆಸರಲೇ ಇರುವಾಗಲೇ ಮೊದಲೇ ಆಗಿರುತ್ತದೆ. 2012 ರಿಂದ ಇವತ್ತಿನವರೆಗೆ ಜಮೀನು ಸರ್ವೆ ಮಾಡಿಸಿರುವುದಿಲ್ಲ. ಭಾಗ ಆದಾಗ ಸರ್ವೆ ಮಾಡಿಸದೆ ಕುಲಕರ್ಣಿಯವರಿಗೆ ಹೇಳಿ ಮುಟೇಶನ್ ಮಾಡಿಸಿಕೊಂಡಿದ್ದೀರಿ ಎಂದರೆ ಸರಿ. ಮುಟೇಶನ್ 2017 ರಲ್ಲಿ ಆಗಿರುತ್ತದೆ. ಸಾಕ್ಷಿ ಮುಂದುವರಿದು ನನ್ನ ಹೆಸರಿಗೆ ಮುಟೇಶನ್ 2012 ರಲ್ಲಿ ಆಗಿರುತ್ತದೆ ಎನ್ನುತ್ತಾರೆ.

3. ನಾನು ಹಾಜರುಪಡಿಸಿರುವ ರಾಜಿ ಡಿಕ್ರಿಯಂತೆ ದಾವೆಯನ್ನು ಇಮಾಮಸಾಬ 2011 ರಲ್ಲಿ ಸಲ್ಲಿಸಿರುತ್ತಾರೆ. ಅವರು ಇಮಾಮಲಿ, ದೊಡ್ಡಮಾಮಸಾಬ, ಜಾಫರಸಾಬ, ಇಸ್ಮಾಯಿಲ್‌ಸಾಬ ಇವರ ಮೇಲೆ ಸಲ್ಲಿಸಿರುತ್ತಾರೆ. 2011 ರಲ್ಲಿ ದಾವಾ ಸಲ್ಲಿಸಿದ ಇಮಾಮಸಾಬ ನನ್ನ ತಂದೆಯವರಾಗಬೇಕು ಎನ್ನುತ್ತಾರೆ. ಆ ದಾವೆಯನ್ನು ಸ ನಂ 29/1, ಒಟ್ಟು ವಿಸ್ತೀರ್ಣ 12-00 ಎಕರೆ ಇರುತ್ತದೆ. 2011 ರಲ್ಲಿ ದಾವೆಯನ್ನು ಜಾಫರಸಾಬ ತಂದೆ ಕತಾಲಸಾಬ, ಇಸ್ಮಾಯಿಲ್‌ಸಾಬ ತಂದೆ ಕತಾಲ್‌ಸಾಬ, ಜಹಿರುದ್ದೀನ್ ತಂದೆ ಇಮಾಮಸಾಬ ಇವರು ನಿಮ್ಮ ತಂದೆ ದೊಡ್ಡ ಇಮಾಮಸಾಬ ಮತ್ತು ಇಮಾಮಅಲಿ ಇವರ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಸರಿ. ರಾಜಿ ಡಿಕ್ರಿ ಪ್ರಕಾರು ಯಾರು ಯಾರಿಗೆ ಎಷ್ಟು ಆಸ್ತಿ ಬಂದಿರುತ್ತದೆ ಮತ್ತು ಅದರ ಸರ್ವೆ ನಂಬರ್ ಏನೂ ಎಂದರೆ ಸಾಕ್ಷಿಯು 29/1 ರಲ್ಲಿ 25, 16 ಗುಂಟೆ ಆಸ್ತಿ ಜಾಫರಸಾಬ ಇವರಿಗೆ ಬಂದಿರುತ್ತದೆ. ಜಾಫರಸಾಬ ರವರಿಗೆ ಬಂದ ಆಸ್ತಿಯ ಚಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಇಸ್ಮಾಯಿಲ್ ಮತ್ತು ಜಹಿರುದ್ದೀನ್ ಅವರ ಭಾಗಕ್ಕೆ 1-00 ಎಕರೆ ಜಮೀನು ಬಂದಿರುತ್ತದೆ. ನನ್ನ ತಂದೆಯ ಭಾಗಕ್ಕೆ 03 ಎಕರೆ 17 ಗುಂಟೆ ಜಮೀನು ಬಂದಿರುತ್ತದೆ.

ಸಾಕ್ಷಿ ಮುಂದುವರಿದು ಒಂದು 3-00 ಎಕರೆ ಮತ್ತು ಇನ್ನೊಂದು 17 ಗುಂಟೆ ಜಮೀನು ಬಂದಿರುತ್ತದೆ ಎನ್ನುತ್ತಾರೆ. ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನಲ್ಲಿ ನಾವು 3 ಜನ ಅಣ್ಣ ತಮ್ಮಂದಿರು ಒಂದೊಂದು ಎಕರೆ ಜಮೀನು ಭಾಗ ಮಾಡಿಕೊಂಡು ಪ್ರತಿವಾದಿ ವಿರುದ್ದ 03 ದಾವೆಗಳನ್ನು ಸಲ್ಲಿಸಿರುತ್ತೇವೆ.

4. ನಾನು ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಸ ನಂ 29/5 ರ ಚಕ್ ಬಂದಿ ಬರೆಸಿದ್ದೇನೆ. ದಾವಾ ಆಸ್ತಿಯ ಚಕ್ ಬಂದಿ ಪೂರ್ವ ದಿಕ್ಕಿಗೆ ಅಹ್ಮದ್ ದ ಹುಸೇನ ಇವರ ಜಮೀನು ಇರುತ್ತದೆ ಸಾಕ್ಷಿ ಮುಂದುವರಿದು ಅವರು ಬೇರೆಯವರಿಗೆ ಜಮೀನು ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಪಶ್ಚಿಮ - ದಿಕ್ಕಿಗೆ ಬಾಬು ರವರ ಜಮೀನು ಇರುತ್ತದೆ ಸಾಕ್ಷಿ ಮುಂದುವರಿದು ಅವರ ಪಕ್ಕದಲ್ಲಿ ಪಡಶೆಟ್ಟಿ ಶರಣಪ್ಪ ಇವರ ಜಮೀನು ಇದೆ ಎನ್ನುತ್ತಾರೆ, ಉತ್ತರ - ದಿಕ್ಕಿಗೆ ಪ್ರತಿವಾದಿ ಇಮಾಮ ಅಲಿ ಇವರ ಜಮೀನು, ದಕ್ಷಿಣ ದಿಕ್ಕಿಗೆ ಮುಖ್ಯ ರಸ್ತೆ ಇರುತ್ತದೆ. ನಿಮ್ಮ ಇಬ್ಬರು ಅಣ್ಣ ತಮ್ಮಂದಿರು ಸಲ್ಲಿಸಿರುವ ದಾವೆಯಲ್ಲಿ ಉತ್ತರ ದಿಕ್ಕಿನಲ್ಲಿ ಪ್ರತಿವಾದಿಯ ಜಮೀನು ಎಂದು ತೋರಿಸಿದ್ದಿರಿ ಎಂದರೆ ಸರಿ. ನೀವು ಹಾಜರುಪಡಿಸಿದ ರಾಜಿ ಡಿಕ್ರಿಯಲ್ಲಿ ನಿಮ್ಮ ತಂದೆಯ ಭಾಗಕ್ಕೆ ಬಂದಿರುವ 3-00 ಎಕರೆ ಜಮೀನಿನ ಚಕ್ ಬಂದಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಬರುವುದಿಲ್ಲ ಎನ್ನುತ್ತಾರೆ. ನಿಮ್ಮ ತಂದೆಯ ಭಾಗಕ್ಕೆ ರಾಜಿ ಡಿಕ್ರಿ ಮೂಲಕ ಬಂದಿರುವ 3-00 ಎಕರೆ ಜಮೀನಿನ ಚಕ್ ಬಂದಿಯಲ್ಲಿ ನೀವು 03 ಜನ ಒಂದೊಂದು ಎಕರೆ ಭಾಗ ಮಾಡಿಕೊಂಡಿದ್ದೀರಿ ಎಂದರೆ ಸರಿ. ನೀವು ಹಾಜರುಪಡಿಸಿರುವ ರಾಜಿ ಡಿಕ್ರಿಯ ಪ್ರಕಾರ ನಿಮ್ಮ ತಂದೆಯ ಭಾಗಕ್ಕೆ ಬಂದಿರುವ 3-00 ಎಕರೆ ಜಮೀನಿನ ಚಕ್ ಬಂದಿ ಪೂರ್ವ ದಿಕ್ಕಿಗೆ ಖೇಣದ ಬೂದೆಪ್ಪ ರವರ ಜಮೀನು ಎಂದರೆ ಸರ, ಪಶ್ಚಿಮ ದಿಕ್ಕಿಗೆ ಪಡಶೆಟ್ಟಿ ಶರಣಪ್ಪ ರವರ ಜಮೀನು ಎಂದು ಬರೆಸಿದ್ದಾರೆ ಎಂದರೆ ಸರಿ. ನೀವು ಮೂರು ಜನ ಸಹೋದರರು ಒಂದೊಂದು ಎಕರೆ ಭಾಗ ಮಾಡಿಕೊಂಡ ಮೇಲೆ

ಜಮೀನು ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎನ್ನುತ್ತಾರೆ. ನೀವು ದಾವಾ ಆಸ್ತಿಯ ಚಕ್ ಬಂದಿಯಲ್ಲಿ ತೊರಿಸಿರುವಂತೆ ಉತ್ತರ ದಿಕ್ಕಿಗೆ ಪ್ರತಿವಾದಿಯ ಜಮೀನು ಇದೆ ಎಂದು ತೋರಿಸಿದ್ದು ಅದು ಎಷ್ಟಿದೆ ಎಂದರೆ 03 ಎಕರೆ 17 ಗುಂಟೆ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು 03 ಎಕರೆ 07 ಗುಂಟೆ ಇದೆ ಎನ್ನುತ್ತಾರೆ. ಸಾಕ್ಷಿಗೆ 03 ಎಕರೆ 07 ಗುಂಟೆ ಇಲ್ಲ 01-00 ಎಕರೆ ಹೊಲ ಇದೆ ಎಂದು ಸೂಚಿಸಿದ್ದು ಇಲ್ಲ ಸುಳ್ಳು ಎಂದು ಹೇಳುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ